**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 21-09-2022 ರಂದು ಹೊಸ ವಾರ್ಡ್ ಸಂಖ್ಯೆ:111 (ಹಗದೂರು)ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
3. ಶ್ರೀ.ತಿಮ್ಮೇಗೌಡ, ಕಿರಿಯ ಅಭಿಯಂತರರು, ಬೆಸ್ಕಾಂ
4. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
5. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
6. ಹಗದೂರು ವಾರ್ಡಿನ ಶಕ್ತಿ ಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

***ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.***

**ಅ) ಬಿ.ಬಿ.ಎಂ.ಪಿ -ವಾರ್ಡ್ ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಕಾಲೋನಿ, ಮಾರಿಯಮ್ಮ ದೇವಸ್ಥಾನದ ರಸ್ತೆಯನ್ನು ಸರ್ವೆ ಮಾಡಿಸುವ ಬಗ್ಗೆ (ಸರ್ವೆ ನಂ.130).
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಕಂದಾಯ ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.
2. ಇಮ್ಮಡಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದವರು ಸರಿಯಾಗಿ ಕೆಲಸ ನಿರ್ವಹಿಸುತ್ತಿರುವುದಿಲ್ಲ ಹಾಗೂ ಸರಿಯಾದ ಸಮಯಕ್ಕೆ ಬರುವುದಿಲ್ಲದರ ಬಗ್ಗೆ ಚರ್ಚೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಡಿ.ಹೆಚ್.ಓ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗುವುದು ಎಂದು ಹೇಳಿದರು.
3. ಅನ್ನಪೂಣೇಶ್ವರಿ ದೇವಸ್ಥಾನದ ಹತ್ತಿರ ಕವರಿಂಗ್ ಸ್ಲಾಬ್ಸ್ ಅಳವಡಿಸುವ ಬಗ್ಗೆ ಮಾಹಿತಿ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಕವರಿಂಗ್ ಸ್ಲಾಬ್ಸ್‌ಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.
4. ಶ್ರೀ.ಬಾಬು, ನೀರು ಸರಬರಾಜುದಾರರು ಸರಿಯಾಗಿ ಕೆಲಸ ನಿರ್ವಹಿಸದಿರುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಸದರಿ ನೀರು ಸರಬರಾಜುದಾರರಿಂದ ಮಾಹಿತಿ ಪಡೆದು, ಸೂಕ್ತ ಕ್ರಮ ವಹಿಸುವುದಾಗಿ ಎಂದು ತಿಳಿಸಿದರು.
5. ಹಗದೂರಿನ ಎಲ್ಲಾ ರಸ್ತೆ ಬದಿಯ ಚರಂಡಿಗಳಲ್ಲಿ ಹೂಳು ಮತ್ತು ಮಣ್ಣನ್ನು ತೆರವುಗೊಳಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

Scanned with OKEN Scanner

6. ಇಮ್ಮಡಿಹಳ್ಳಿ ಗ್ರಾಮದಲ್ಲಿ (ಓ.ಎಸ್)ಕೊಳವೆ ಸಾಲುಗಳನ್ನು ಅಳವಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಮುಂಬರುವ ಅನುದಾನದಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.
7. ಇಮ್ಮಡಿಹಳ್ಳಿ - ಬಿ.ಜೆ.ಪಿ ಕಛೇರಿ ಎದುರು ರಸ್ತೆಯ ಬದಿ ಚರಂಡಿಯ ಮೇಲೆ ಕವರಿಂಗ್ ಸ್ಲಾಬ್ಸ್ ಅಳವಡಿಸುವ ಬಗ್ಗೆ ಮಾಹಿತಿ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಕವರಿಂಗ್ ಸ್ಲಾಬ್ಸ್‌ಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.
8. ಇಮ್ಮಡಿಹಳ್ಳಿ ಗ್ರಾಮದ ಬೋರ್‌ವೆಲ್‌ಗೆ ಹೊಸದಾಗಿ ಪಂಪ್-ಮೋಟಾರ್ ಅಳವಡಿಸುವುದರ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಸದರಿ ಬೋರ್‌ವೆಲ್‌ಗೆ ಹೊಸದಾಗಿ ಪಂಪ್-ಮೋಟಾರ್ ಅಳವಡಿಸಲಾಗುವುದು ಎಂದು ತಿಳಿಸಿದರು.
9. ಇಮ್ಮಡಿಹಳ್ಳಿ ಗ್ರಾಮದಲ್ಲಿ ಶ್ರೀ.ರಾಮಸ್ವಾಮಿ ಎಂಬುವವರ ರಸ್ತೆಯ ಮೇಲೆ ಶೌಚಾಲಯ ನಿರ್ಮಿಸಿದ್ದು, ಇದನ್ನು ತೆರವುಗೊಳಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಸ್ಥಳ ಪರಿಶೀಲಿಸಿ, ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು.
10. ನಾಗೊಂಡನಹಳ್ಳಿ ಗ್ರಾಮದ ಹೊಡೆದಿರುವ ಕೊಳವೆ ಸಾಲುಗಳನ್ನು ರಿಪೇರಿ ಮಾಡುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು ರವರು ಗುತ್ತಿಗೆದಾರರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
11. ಚನ್ನಸಂದ್ರ-ಇಮ್ಮಡಿಹಳ್ಳಿಯ ಕಾಲುದಾರಿಯನ್ನು ಸರ್ವೆ ಮಾಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಕಂದಾಯ ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.
12. ನಾಗೊಂಡನಹಳ್ಳಿ ಗ್ರಾಮದ ಸರ್ವೆ ನಂ.120, 122, 123 ಮತ್ತು 124 ಸರ್ವೆ ಮಾಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಕಂದಾಯ ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.
13. ನಾಗೊಂಡನಹಳ್ಳಿ ಗ್ರಾಮಕ್ಕೆ ಕಲ್ವರ್ಟ್ ಸ್ಲಾಬ್ಸ್‌ಗಳನ್ನು ಅಳವಡಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಸ್ಥಳ ಪರಿಶೀಲಿಸಿ, ಗುತ್ತಿಗೆದಾರರಿಗೆ ತಿಳಿಸಿ, ಅಳವಡಿಸುವುದಾಗಿ ತಿಳಿಸಿದರು.
14. ಹಗದೂರು ವಾರ್ಡ್‌ಗೆ ಮಾರ್ಷಲ್‌ಗಳನ್ನು ನೇಮಿಸುವ ಬಗ್ಗೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಆ) ಬಿ.ಬಡ್ಲ್ಯೂ.ಎಸ್.ಎಸ್.ಬಿ - ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಎನ್.ವಿ.ಟಿ ವಿಲ್ಲಾಸ್ ರವರು ಎಸ್.ಟಿ.ಪಿ ನೀರನ್ನು ರಸ್ತೆ ಬದಿಯ ಚರಂಡಿಗೆ ಬಿಡುತ್ತಿರುವ ಬಗ್ಗೆ.
   - ➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಬಡ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

Scanned with OKEN Scanner

2. ಅನ್ನಪೂಣೇಶ್ವರಿ ದೇವಸ್ಥಾನದ ರಸ್ತೆಯ ಒಳಚರಂಡಿ ಛೇಂಬರ್ಸ್ ತುಂಬಿ ಹರಿಯುತ್ತಿರುವ ಬಗ್ಗೆ.

- ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಿಗೆ ತಿಳಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಇ) ರಸ್ತೆ ಮೂಲಭೂತ ಸೌಕರ್ಯ ವಿಭಾಗ - ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿ ಹೊಸದಾಗಿ ಚರಂಡಿ ನಿರ್ಮಿಸುವ ಬಗ್ಗೆ.

- ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, (ಮೇಜರ್ ರೋಡ್ಸ್) ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಈ) ಬೃಹತ್ ನೀರುಗಾಲುವೆ ಇಲಾಖೆ - ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಶಿವಕುಂಟಮ್ಮ ದೇವಸ್ಥಾನದಿಂದ ಚನ್ನಸಂದ್ರ ರಾಜಕಾಲುವೆ ವರೆಗೆ ಸಂಪರ್ಕ ಕಲ್ಪಿಸುವ ಬಗ್ಗೆ.

- ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

2. ದಕ್ಷಿಣ ಪಿನಾಕಿನಿ ನದಿಯ ರಾಜಕಾಲುವೆಯನ್ನು ಡಿಸಿಲ್ಟ್ ಮಾಡುವ ಬಗ್ಗೆ.

- ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

3. ಪ್ರೆಸ್ಟೀಜ್ ಓಜೋನ್ ಹಿಂಭಾಗದ ರಾಜಕಾಲುವೆಯನ್ನು ಡಿಸಿಲ್ಟ್ ಕಾಮಗಾರಿಯನ್ನು ಸರಿಯಾಗಿ ಕಾರ್ಯನಿರ್ವಹಿಸದಿರುವ ಬಗ್ಗೆ.

- ಸದರಿ ವಿಷಯಕ್ಕೆ ನೊಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Bablali

**ಕಾರ್ಯದರ್ಶಿ**

**ಸಹಾಯಕ ಅಭಿಯಂತರರು**

**ವಾರ್ಡ್ ನಂ: 111**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned with OKEN Scanner